# ಡಿಜಿಟಲ್ ಯುಗದಲ್ಲಿ ಭಾಷೆಯ ರೂಪಾಂತರ: ಸಾಮಾಜಿಕ ಮಾಧ್ಯಮಗಳ ಪ್ರಭಾವ

**ಜ್ಯೋತಿ ಎಸ್. ಭಟ್**

ಕನ್ನಡ ವಿಭಾಗ, ಜ್ಯೋತಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್ ಕಾಲೇಜು, ತಾತಗುಣಿ, ಬೆಂಗಳೂರು.

**DOI: https://doi.org/10.5281/zenodo.18787538**

## ABSTRACT:

ಜನರು ವಿವಿಧ ಸಮುದಾಯಗಳೊಂದಿಗೆ ಸಂವಹನ ನಡೆಸಲು ಮತ್ತು ಸಂಪರ್ಕಿಸಲು ಇಂದಿನ ಜನ ಸಮುದಾಯವು ಸಾಮಾಜಿಕ ಮಾಧ್ಯಮವನ್ನು ವೇದಿಕೆಯಾಗಿ ಬಳಸುತ್ತಿದ್ದಾರೆ. ಡಿಜಿಟಲ್ ತಂತ್ರಜ್ಞಾನ ಮತ್ತು ಸಾಮಾಜಿಕ ಮಾಧ್ಯಮಗಳ ವ್ಯಾಪಕ ಬಳಕೆ ಮಾನವ ಸಂವಹನದ ಸ್ವರೂಪವನ್ನೇ ಬದಲಾಯಿಸಿದೆ. ಭಾಷೆ ಒಂದು ಚಲನೆಯುತ ಸಾಮಾಜಿಕ ವ್ಯವಸ್ಥೆಯಾಗಿದ್ದು, ಡಿಜಿಟಲ್ ಯುಗದಲ್ಲಿ ಅದು ಹೊಸ ರೂಪಗಳು, ಶೈಲಿಗಳು ಮತ್ತು ಅರ್ಥಾತ್ಮಕ ಬದಲಾವಣೆಗಳನ್ನು ಅನುಭವಿಸುತ್ತಿದೆ. ಭಾಷೆಯ ಬೆಳವಣಿಗೆಯ ಮೇಲೆ ಸಾಮಾಜಿಕ ಮಾಧ್ಯಮವು ಅಗಾಧವಾದ ಪರಿಣಾಮವನ್ನುಂಟು ಮಾಡಿದೆ. ಸಾಮಾಜಿಕ ಮಾಧ್ಯಮವು ಪ್ರಸ್ತುತವಾಗಿ ಹೆಚ್ಚಾಗಿ ಬೆಳೆಯುತ್ತಿದ್ದು, ಭಾಷೆಯ ಸ್ವರೂಪ, ಬಳಕೆ ಮತ್ತು ವಿಕಾಸದ ಮೇಲೆ ಗಣನೀಯ ಪ್ರಭಾವವನ್ನು ಬೀರುತ್ತಿವೆ. ಫೇಸ್‌ಬುಕ್, ವಾಟ್ಸಾಪ್, ಇನ್‌ಸ್ಟಾಗ್ರಾಂ, ಟ್ವಿಟರ್ (X) ಮತ್ತು ಯೂಟ್ಯೂಬ್ ಮತ್ತಿತರ ಸಾಮಾಜಿಕ ಮಾಧ್ಯಮದ ವೇದಿಕೆಗಳು ಭಾಷೆಯ ಸಂಕ್ಷಿಪ್ತೀಕರಣ, ಹೊಸ ಪದಗಳ ಸೃಷ್ಟಿ ಹಾಗೂ ಲಿಪಿ ಬಳಕೆಯಲ್ಲಿ ಹಲವಾರು ಬದಲಾವಣೆಗಳಿಗೆ ಕಾರಣವಾಗಿವೆ ಎಂದರೆ ತಪ್ಪಾಗಲಾರದು.

ಈ ಸಂಶೋಧನಾ ಪ್ರಬಂಧವು ಸಾಮಾಜಿಕ ಮಾಧ್ಯಮದಲ್ಲಿ ಭಾಷೆಯ ಶಬ್ದಕೋಶ, ವ್ಯಾಕರಣ, ಲಿಪಿ ಹಾಗೂ ಭಾಷಾ ಗುರುತಿನ ಮೇಲೆ ಬೀರುವ ಪರಿಣಾಮಗಳನ್ನು ವಿಶ್ಲೇಷಿಸುತ್ತದೆ. ಅಧ್ಯಯನವು ಭಾಷೆಯ ರೂಪಾಂತರವು ಸೃಜನಶೀಲತೆಯನ್ನು ಹೆಚ್ಚಿಸಿದರೂ, ಶುದ್ಧತೆ ಮತ್ತು ವ್ಯಾಕರಣದ ಮೇಲಿನ ಗಮನ ಕಡಿಮೆಯಾಗುತ್ತಿರುವುದನ್ನೂ ತೋರಿಸುತ್ತದೆ. ಈ ಅಧ್ಯಯನವು ಗುಣಾತ್ಮಕ ವಿಧಾನವನ್ನು ಅನುಸರಿಸಿದ್ದು, ಸಾಮಾಜಿಕ ಮಾಧ್ಯಮದ ಉದಾಹರಣೆಗಳು ಹಾಗೂ ಇತ್ತೀಚಿನ ಭಾಷಾ ಪ್ರವೃತ್ತಿಗಳ ವಿಶ್ಲೇಷಣೆಯ ಮುಖಾಂತರ ಭಾಷೆಯ ಮೇಲೆ ಸಾಮಾಜಿಕ ಮಾಧ್ಯಮದ ಧನಾತ್ಮಕ ಹಾಗೂ ನಕಾರಾತ್ಮಕ ಪರಿಣಾಮಗಳನ್ನು ಚರ್ಚಿಸುತ್ತದೆ. ಸಾಮಾಜಿಕ ಮಾಧ್ಯಮವು ಭಾಷೆಯ ವಿಕಾಸಕ್ಕೆ ಸಹಕಾರಿಯಾಗಿರುವುದರ ಜೊತೆಗೆ, ಮಾನಕ ಭಾಷೆಯ ಬಳಕೆಗೆ ಸವಾಲುಗಳನ್ನುಂಟು ಮಾಡುತ್ತಿರುವುದನ್ನು ನಾವು ಪ್ರಸ್ತುತವಾಗಿ ಕಾಣಬಹುದಾಗಿದೆ.

## KEYWORDS:

ಸಾಮಾಜಿಕ ಮಾಧ್ಯಮ, ಡಿಜಿಟಲ್ ಯುಗ, ಭಾಷಾ ಬದಲಾವಣೆ, ಕನ್ನಡ ಭಾಷೆ.

## 1. ಪರಿಚಯ (Introduction)

ಭಾಷೆ ಮಾನವ ಸಮಾಜದ ಮೂಲ ಸಂವಹನ ಸಾಧನವಾಗಿದ್ದು, ಕಾಲಾನುಸಾರವಾಗಿ ಸಾಮಾಜಿಕ, ಸಾಂಸ್ಕೃತಿಕ ಹಾಗೂ ತಾಂತ್ರಿಕ ಬದಲಾವಣೆಗಳಿಗೆ ಅನುಗುಣವಾಗಿ ರೂಪಾಂತರಗೊಳ್ಳುತ್ತಾ ಬಂದಿವೆ. ಇಪ್ಪತ್ತೊಂದನೇ ಶತಮಾನದಲ್ಲಿ ಡಿಜಿಟಲ್ ತಂತ್ರಜ್ಞಾನಗಳ ಬೆಳವಣಿಗೆ ಭಾಷೆಯ ಬಳಕೆ ಮತ್ತು ಸ್ವರೂಪದಲ್ಲಿ ಮಹತ್ತರ ಬದಲಾವಣೆಗಳನ್ನು ತಂದಿದೆ. ಮಾಹಿತಿ ತಂತ್ರಜ್ಞಾನ ಮತ್ತು ಡಿಜಿಟಲ್ ಮಾಧ್ಯಮಗಳ ವೇಗದ ಬೆಳವಣಿಗೆ ಮತ್ತು ಅತಿ ವೇಗದಲ್ಲಿ ಸಂವಹನವನ್ನು ಮಾಡಲು, ಭಾಷೆಯ ಬಳಕೆಯಲ್ಲಿ ಮಹತ್ತರ ಬದಲಾವಣೆಗಳನ್ನು ತಂದಿದೆ. ವಿಶೇಷವಾಗಿ ಸಾಮಾಜಿಕ ಮಾಧ್ಯಮವು ಭಾಷೆಯ ದೈನಂದಿನ ಬಳಕೆಯ ಮೇಲೆ ನೇರವಾಗಿ ಪ್ರಭಾವವನ್ನು ಬೀರಿದೆ.

ಸಾಮಾಜಿಕ ಮಾಧ್ಯಮವು ಸಂವಹನವನ್ನು ಸಂಕ್ಷಿಪ್ತವಾಗಿ ಮತ್ತು ಅನೌಪಚಾರಿಕವಾಗಿಸಿದೆ. ಈ ಹಿನ್ನೆಲೆಯಲ್ಲಿ, ಕನ್ನಡದಂತಹ ಪ್ರಾದೇಶಿಕ ಭಾಷೆಗಳು ಹೊಸ ಸವಾಲುಗಳು ಮತ್ತು ಅವಕಾಶಗಳನ್ನು ಎದುರಿಸುತ್ತಿವೆ. ಇದರ ಪರಿಣಾಮವಾಗಿ ಕನ್ನಡ ಭಾಷೆಯ ಶೈಲಿಯ ಮೇಲೆ, ಪದಸಂಪತ್ತು ಮತ್ತು ವ್ಯಾಕರಣದಲ್ಲಿ ಹೊಸ ಹೊಸ ಪ್ರವೃತ್ತಿಗಳು ಕಂಡುಬರುತ್ತಿವೆ. ಈ ಹಿನ್ನೆಲೆಯಲ್ಲಿ, ಸಾಮಾಜಿಕ ಮಾಧ್ಯಮವು ಭಾಷೆಯ ಮೇಲೆ ಹೇಗೆ ಪ್ರಭಾವ ಬೀರುತ್ತಿದೆ ಎಂಬುದನ್ನು ಪ್ರಸ್ತುತವಾಗಿ ಅಧ್ಯಯನ ಮಾಡುವ ಅಗತ್ಯ ಉಂಟಾಗಿದೆ.

## 2. ಅಧ್ಯಯನದ ಉದ್ದೇಶಗಳು (Objectives of the Study)

- ಭಾಷೆಯ ರೂಪಾಂತರಕ್ಕೆ ಸಾಮಾಜಿಕ ಮಾಧ್ಯಮವು ಹೇಗೆ ಕಾರಣವಾಗುತ್ತಿದೆ ಎಂಬುದನ್ನು ವಿಶ್ಲೇಷಿಸುವುದು.
- ಭಾಷೆಯ ಮೇಲೆ ಸಾಮಾಜಿಕ ಮಾಧ್ಯಮದ ಧನಾತ್ಮಕ ಮತ್ತು ನಕಾರಾತ್ಮಕ ಪರಿಣಾಮಗಳನ್ನು ಗುರುತಿಸುವುದು.
- ಸಾಮಾಜಿಕ ಮಾಧ್ಯಮದಲ್ಲಿ ಕನ್ನಡ ಭಾಷೆಯ ಬಳಕೆಯ ಸ್ವರೂಪವನ್ನು ಅಧ್ಯಯನ ಮಾಡುವುದು.
- ಭಾಷಾ ಶುದ್ಧತೆ ಮತ್ತು ಮಾನಕ ಭಾಷೆಯ ಮೇಲೆ ಸಾಮಾಜಿಕ ಮಾಧ್ಯಮದ ಪರಿಣಾಮವನ್ನು ಪರಿಶೀಲಿಸುವುದು.
- ಸಾಮಾಜಿಕ ಮಾಧ್ಯಮದಲ್ಲಿ ಭಾಷೆ ಯಾವ ರೀತಿ ಬಳಕೆಯಾಗುತ್ತಿದೆ ಎಂಬುದನ್ನು ಗುರುತಿಸುವುದು.
- ಡಿಜಿಟಲ್ ಯುಗದಲ್ಲಿ ಭಾಷೆಯ ರೂಪಾಂತರದ ಸ್ವರೂಪವನ್ನು ವಿಶ್ಲೇಷಿಸುವುದು.
- ಸಾಮಾಜಿಕ ಮಾಧ್ಯಮವು ಭಾಷೆಯ ಮೇಲೆ ಬೀರುವ ಪ್ರಭಾವವನ್ನು ಅಧ್ಯಯನ ಮಾಡುವುದು.

- ಕನ್ನಡ ಭಾಷೆಯ ಬಳಕೆಯಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಗುರುತಿಸುವುದು.
- ಮಿಶ್ರ ಭಾಷಾ ಬಳಕೆ ಮತ್ತು ಸಂಕ್ಷಿಪ್ತ ಭಾಷೆಯ ಪರಿಣಾಮಗಳನ್ನು ವಿಶ್ಲೇಷಿಸುವುದು.
- ಭಾಷೆಯ ಭವಿಷ್ಯದ ದಿಕ್ಕುಗಳ ಬಗ್ಗೆ ಚರ್ಚಿಸುವುದು.

**3. ದತ್ತಾಂಶ ಸಂಗ್ರಹಣೆ**

- ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳು.
- ಆನ್‌ಲೈನ್ ಸಂವಾದಗಳು.
- ದ್ವಿತೀಯಕ ಮೂಲಗಳು (ಪುಸ್ತಕಗಳು, ಜರ್ನಲ್ ಲೇಖನಗಳು).

**4. ಸಾಹಿತ್ಯ ವಿಮರ್ಶೆ (Review of Literature)**

ಭಾಷೆ ಮತ್ತು ತಂತ್ರಜ್ಞಾನಗಳ ಸಂಬಂಧವನ್ನು ಹಲವಾರು ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಕ್ರಿಸ್ಟಲ್ (2006) ಅವರು ಡಿಜಿಟಲ್ ಮಾಧ್ಯಮವು ಭಾಷೆಗೆ ಹೊಸ ಶೈಲಿಗಳನ್ನು ಪರಿಚಯಿಸಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಬಳಸುವ ಭಾಷೆಯು ಮಾತಿನ ಮತ್ತು ಬರವಣಿಗೆಯ ನಡುವಿನ ಮಧ್ಯಂತರ ರೂಪವಾಗಿದೆ ಎಂಬುದು ಅವರ ವಾದ.

ಭಾರತೀಯ ಭಾಷೆಗಳ ಕುರಿತು ನಡೆದ ಅಧ್ಯಯನಗಳು, ಪ್ರಾದೇಶಿಕ ಭಾಷೆಗಳು ಡಿಜಿಟಲ್ ವೇದಿಕೆಯಲ್ಲಿ ಹೆಚ್ಚು ಜನಪ್ರಿಯವಾಗುತ್ತಿವೆ ಎಂದು ಸೂಚಿಸುತ್ತವೆ. ಕನ್ನಡ ಭಾಷೆಯ ವಿಷಯದಲ್ಲಿ, ಇಂಗ್ಲಿಷ್ ಮತ್ತು ಕನ್ನಡದ ಮಿಶ್ರ ಬಳಕೆ ಹೆಚ್ಚುತ್ತಿರುವುದು ಗಮನಾರ್ಹವಾಗಿದೆ. ಇದು ಭಾಷೆಯ ಸ್ವರೂಪದಲ್ಲಿ ಹೊಸ ರೂಪಾಂತರಗಳನ್ನುಂಟು ಮಾಡುತ್ತಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ಪದಸಂಕ್ಷೇಪ, ಚಿಹ್ನೆಗಳು ಮತ್ತು ಚಿತ್ರಾತ್ಮಕ ಅಂಶಗಳ ಬಳಕೆ ಹೆಚ್ಚಾಗಿದೆ. ಭಾರತೀಯ ಸಂದರ್ಭದಲ್ಲಿನ ಅಧ್ಯಯನಗಳು ಪ್ರಾದೇಶಿಕ ಭಾಷೆಗಳು ಇಂಗ್ಲಿಷ್‌ನೊಂದಿಗೆ ಮಿಶ್ರಣಗೊಂಡು ಹೊಸ ಸಂವಹನ ಶೈಲಿಗಳನ್ನು ರೂಪಿಸುತ್ತಿವೆ ಎಂದು ತಿಳಿಸುತ್ತವೆ (Androutsopoulos, 2015). ಕನ್ನಡ ಭಾಷೆಯ ಕುರಿತಾಗಿ ಕೆಲವು ಅಧ್ಯಯನಗಳು ಲಿಪ್ಯಂತರಿತ ಕನ್ನಡ (Roman Kannada) ಬಳಕೆಯ ಹೆಚ್ಚಳವನ್ನು ಗಮನಿಸಿವೆ, ಆದರೆ ಸಮಗ್ರ ವಿಶ್ಲೇಷಣೆ ಇನ್ನೂ ಅಪೂರ್ಣವಾಗಿದೆ.

**5. ಸಂಶೋಧನಾ ವಿಧಾನ (Research Methodology)**

ಭಾಷಾಶಾಸ್ತ್ರೀಯ ವಿಶ್ಲೇಷಣೆಯ ಮೂಲಕ ಭಾಷೆಯ ಬದಲಾವಣೆಗಳ ಸ್ವರೂಪವನ್ನು ವಿವೇಚಿಸಲಾಗಿದೆ. ಈ ಅಧ್ಯಯನವು ಗುಣಾತ್ಮಕ ಸಂಶೋಧನಾ

ವಿಧಾನವನ್ನು ಅನುಸರಿಸಿದೆ. ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿನ ಭಾಷಾ ಬಳಕೆಯ ಉದಾಹರಣೆಗಳು, ಇತ್ತೀಚಿನ ಸಂಶೋಧನಾ ಲೇಖನಗಳು, ಪುಸ್ತಕಗಳು ಮತ್ತು ಆನ್‌ಲೈನ್ ಮೂಲಗಳನ್ನು ಆಧಾರವಾಗಿ ತೆಗೆದುಕೊಳ್ಳಲಾಗಿದೆ ಮತ್ತು ಸಾಮಾಜಿಕ ಮಾಧ್ಯಮ ವೇದಿಕೆಗಳಿಂದ ಆಯ್ದ ಕನ್ನಡ ಪೋಸ್ಟ್‌ಗಳು, ಕಾಮೆಂಟ್‌ಗಳು ಮತ್ತು ಸಂದೇಶಗಳನ್ನು ವಿಶ್ಲೇಷಿಸಲಾಗಿದೆ. ಜೊತೆಗೆ, 18–35 ವಯೋಮಾನದ 50 ಬಳಕೆದಾರರಿಂದ ಸಂಗ್ರಹಿಸಿದ ಅಭಿಪ್ರಾಯಗಳನ್ನು, ಸಾಮಾಜಿಕ ಮಾಧ್ಯಮದಲ್ಲಿ (ವಾಟ್ಸಾಪ್ ಸಂದೇಶಗಳು, ಫೇಸ್‌ಬುಕ್ ಪೋಸ್ಟ್‌ಗಳು, ಇನ್‌ಸ್ಟಾಗ್ರಾಮ್ ಕಾಮೆಂಟ್‌ಗಳು) ಬಳಸುವ ಭಾಷಾ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ವಿಷಯ ವಿಶ್ಲೇಷಣೆ (content analysis) ಈ ಅಧ್ಯಯನದ ಪ್ರಮುಖ ವಿಧಾನವಾಗಿದೆ.

### 6. ಸಾಮಾಜಿಕ ಮಾಧ್ಯಮ ಮತ್ತು ಭಾಷೆಯ ಪರಸ್ಪರ ಸಂಬಂಧ

ಬಳಕೆದಾರರು ತಮ್ಮ ಅಭಿಪ್ರಾಯ, ಭಾವನೆ ಮತ್ತು ಸಾಮಾಜಿಕ ಗುರುತನ್ನು ವ್ಯಕ್ತಪಡಿಸಲು ಭಾಷೆಯನ್ನು ಸ್ವತಂತ್ರವಾಗಿ ಬಳಸುತ್ತಾರೆ. ಹಾಗಾಗಿ ಸಾಮಾಜಿಕ ಮಾಧ್ಯಮವು ಭಾಷೆಯನ್ನು ಕೇವಲ ಸಂವಹನಕ್ಕಾಗಿಯೇ ಇರುವ ಸಾಧನವಾಗಿರದೆ, ಗುರುತಿನ ಅಭಿವ್ಯಕ್ತಿಯ ಸಾಧನವಾಗಿಯೂ ರೂಪಿಸಿದೆ. ಇದರಿಂದ ಭಾಷೆಯಲ್ಲಿನ ಅನೌಪಚಾರಿಕತೆ ಹೆಚ್ಚಾಗಿದೆ.

### 7. ಡಿಜಿಟಲ್ ಯುಗದಲ್ಲಿ ಭಾಷೆಯ ರೂಪಾಂತರ (Language Transformation in the Digital Age)

ಡಿಜಿಟಲ್ ಯುಗದಲ್ಲಿ ಭಾಷೆಯು ವೇಗ, ಸಂಕ್ಷಿಪ್ತತೆ ಮತ್ತು ಅನೌಪಚಾರಿಕತೆಯತ್ತ ತಿರುಗುತ್ತಿದೆ. ದೀರ್ಘ ವಾಕ್ಯಗಳ ಬದಲು ಸಂಕ್ಷಿಪ್ತ ಪದಗಳು ಮತ್ತು ಚಿಹ್ನೆಗಳ ಬಳಕೆ ಹೆಚ್ಚಾಗಿದೆ. ಉದಾಹರಣೆಗೆ, "ನಂತರ ಮಾತಾಡೋಣ" ಎಂಬುದನ್ನು "ntn mtdna" ಎಂಬಂತೆ ಬಳಸುವುದು ಕಂಡುಬರುತ್ತಿದೆ. ಇದಲ್ಲದೆ, ಎಮೋಜಿಗಳು ಮತ್ತು ಚಿತ್ರಚಿಹ್ನೆಗಳು ಭಾಷೆಯ ಅರ್ಥವ್ಯವಸ್ಥೆಗೆ ಹೊಸ ಆಯಾಮವನ್ನು ನೀಡಿವೆ. ಇವು ಭಾವನೆಗಳನ್ನು ತ್ವರಿತವಾಗಿ ವ್ಯಕ್ತಪಡಿಸಲು ಸಹಕಾರಿಯಾಗಿವೆ.

### 8. ಭಾಷೆಯ ಮೇಲೆ ಸಾಮಾಜಿಕ ಮಾಧ್ಯಮದ ಪ್ರಭಾವ

ಭಾಷಾ ಶಬ್ದಕೋಶದ ಮೇಲೆ ಪ್ರಭಾವ: ಸಾಮಾಜಿಕ ಮಾಧ್ಯಮವು ಹೊಸ ಪದಗಳ ಸೃಷ್ಟಿಗೆ ಕಾರಣವಾಗಿದೆ. ಉದಾಹರಣೆಗೆ, "ಲೈಕ್", "ಶೇರ್", "ಕಾಮೆಂಟ್", "ರೀಲ್ಸ್" ಮುಂತಾದ ಪದಗಳು ದಿನನಿತ್ಯದ ಭಾಷೆಯಲ್ಲಿ ಸೇರಿವೆ.

### 9. ಕೋಡ್–ಮಿಶ್ರಣ ಮತ್ತು ಕೋಡ್–ಸ್ವಿಚಿಂಗ್

ಕನ್ನಡ ಮತ್ತು ಇಂಗ್ಲಿಷ್, ಅಥವಾ ಇತರ ಭಾಷೆಗಳ ಮಿಶ್ರ ಬಳಕೆಯು ಸಾಮಾಜಿಕ ಮಾಧ್ಯಮದಲ್ಲಿ ಸಾಮಾನ್ಯವಾಗಿದೆ. ಇದು ಭಾಷೆಯ ಸಹಜ ವಿಕಾಸವನ್ನು

ಸೂಚಿಸುವುದರ ಜೊತೆಗೆ, ಭಾಷಾ ಶುದ್ಧತೆಗೆ ಸವಾಲು ತಂದಿದೆ. ಇದಲ್ಲದೆ ಎಮೋಜಿ ಮತ್ತು ದೃಶ್ಯ ಸಂವಹನದಲ್ಲಿ ಭಾವನೆಗಳನ್ನು ವ್ಯಕ್ತಪಡಿಸಲು ಎಮೋಜಿಗಳು ಪ್ರಮುಖ ಪಾತ್ರವಹಿಸುತ್ತಿವೆ. ಇವು ಭಾಷೆಯ ಅರ್ಥವನ್ನು ಪೂರಕವಾಗಿ ಅಥವಾ ಕೆಲವೊಮ್ಮೆ ಬದಲಿಸುವಂತೆ ಬಳಸಲಾಗುತ್ತವೆ.

**10. ಕನ್ನಡ ಲಿಪಿ ಬಳಕೆಯ ಬದಲಾವಣೆ**

ಕನ್ನಡ ಭಾಷೆಯನ್ನು ಇಂಗ್ಲಿಷ್ ಲಿಪಿಯಲ್ಲಿ ಬರೆಯುವ ಪ್ರವೃತ್ತಿ ಹೆಚ್ಚಾಗಿದೆ. ಇದರಿಂದ ಕನ್ನಡದ ಲಿಪಿ ಅರಿವಿನ ಮೇಲೆ ಪರಿಣಾಮ ಬೀರುತ್ತಿದೆ. ಇತ್ತೀಚಿನ ದಿನಗಳಲ್ಲಿ ಕನ್ನಡ–ಇಂಗ್ಲಿಷ್ ಮಿಶ್ರಭಾಷೆ (Kanglish) ವ್ಯಾಪಕವಾಗಿದ್ದು, ಕನ್ನಡವನ್ನು ರೋಮನ್ ಲಿಪಿಯಲ್ಲಿ ಬರೆಯುವ ಪ್ರವೃತ್ತಿ ಹೆಚ್ಚಿದ್ದು, ಇದು ಓದಲು ಸುಲಭವಾದರೂ ಸಹ ಲಿಪಿಯ ಶುದ್ಧತೆಗೆ ಸವಾಲನ್ನು ಒಡ್ಡುತ್ತಿದೆ.

**11. ವ್ಯಾಕರಣ ಮತ್ತು ವಾಕ್ಯರಚನೆ**

ಸಂಕ್ಷಿಪ್ತ ಸಂದೇಶಗಳ ಬಳಕೆಯಿಂದ ಪೂರ್ಣ ವಾಕ್ಯರಚನೆಯ ಬಳಕೆ ಕಡಿಮೆಯಾಗುತ್ತಿದೆ. ಇದು ಭಾಷೆಯ ವ್ಯಾಕರಣಿಕ ಶುದ್ಧತೆಯನ್ನು ಕುಂದಿಸುತ್ತದೆ. ಭಾಷೆಯ ಸಂಕ್ಷೇಪ ಮತ್ತು ಸರಳೀಕರಣ, ಸಾಮಾಜಿಕ ಮಾಧ್ಯಮಗಳಲ್ಲಿ ವೇಗದ ಸಂವಹನದ ಅಗತ್ಯದಿಂದಾಗಿ ಪದಸಂಕ್ಷೇಪ ಮತ್ತು ಸರಳ ವಾಕ್ಯರಚನೆ ಸಾಮಾನ್ಯವಾಗಿದೆ. ಉದಾಹರಣೆಗೆ, ಪೂರ್ಣ ವಾಕ್ಯಗಳ ಬದಲು ಚಿಕ್ಕ ಪದಗುಚ್ಛಗಳನ್ನು ಬಳಸಲಾಗುತ್ತಿದೆ.

**12. ಧನಾತ್ಮಕ ಪರಿಣಾಮಗಳು (Positive Impacts)**

- ಭಾಷೆಯ ವ್ಯಾಪ್ತಿ ಮತ್ತು ಬಳಕೆಯ ವಿಸ್ತರಣೆ.
- ಹೊಸ ಪದಗಳ ಸೃಷ್ಟಿ ಮತ್ತು ಭಾಷೆಯ ಚೈತನ್ಯ.
- ಭಾಷಾ ಅಭಿವ್ಯಕ್ತಿಗೆ ಸ್ವಾತಂತ್ರ್ಯ.

**13. ನಕಾರಾತ್ಮಕ ಪರಿಣಾಮಗಳು (Negative Impacts)**

- ಭಾಷಾ ಶುದ್ಧತೆಯಲ್ಲಿ ಕುಸಿತ.
- ಮಾನಕ ಭಾಷೆಯ ಬಳಕೆಯಲ್ಲಿ ಇಳಿಕೆ.
- ಕನ್ನಡ ಲಿಪಿ ಜ್ಞಾನದಲ್ಲಿ ಕುಂದು.
- ಅತಿಯಾದ ಇಂಗ್ಲಿಷ್ ಮತ್ತು ಇತರ ಭಾಷೆಯ ಪ್ರಭಾವ.

**14. ಚರ್ಚೆ (Discussion)**

ಸಾಮಾಜಿಕ ಮಾಧ್ಯಮವು ಭಾಷೆಯ ವಿಕಾಸಕ್ಕೆ ಸಹಕಾರಿಯಾಗಿದ್ದರೂ, ಅದರ

ಅತಿಯಾದ ಮತ್ತು ಅಶಿಸ್ತಿನ ಬಳಕೆ ಭಾಷೆಯ ಮೂಲ ಸ್ವರೂಪಕ್ಕೆ ಧಕ್ಕೆ ತರುವ ಸಾಧ್ಯತೆಗಳು ಹೆಚ್ಚಾಗಿವೆ. ಆದ್ದರಿಂದ ಕನ್ನಡ ಭಾಷಾ ಜಾಗೃತಿ ಮತ್ತು ಜವಾಬ್ದಾರಿಯುತವಾದ ಭಾಷೆಯ ಬಳಕೆ ಅಗತ್ಯವಾಗಿದೆ.

## 15. ಉಪಸಂಹಾರ (Conclusion)

ಸಾಮಾಜಿಕ ಮಾಧ್ಯಮವು ಭಾಷೆಯ ಮೇಲೆ ಆಳವಾದ ಮತ್ತು ಬಹುಮುಖ ಪ್ರಭಾವ ಬೀರುತ್ತಿದೆ. ಇದು ಭಾಷೆಯ ವಿಕಾಸಕ್ಕೆ ಅವಕಾಶ ನೀಡುವುದರ ಜೊತೆಗೆ, ಭಾಷಾ ಶುದ್ಧತೆ, ನುಡಿ, ಲಿಪಿ ಮತ್ತು ಮಾನಕತೆಯನ್ನು ಕಾಪಾಡಿಕೊಳ್ಳುವ ಸವಾಲುಗಳನ್ನು ಒಡ್ಡುತ್ತದೆ. ಆದ್ದರಿಂದ ಶಿಕ್ಷಣ ಸಂಸ್ಥೆಗಳು, ಭಾಷಾ ತಜ್ಞರು ಮತ್ತು ಭಾಷಾ ಬಳಕೆದಾರರು ಭಾಷೆಯ ಸಂರಕ್ಷಣೆಯತ್ತ ಗಮನ ಹರಿಸುವಂತಹ ಪರಿಸ್ಥಿತಿಯು ಎದುರಾಗಿದೆ. ಡಿಜಿಟಲ್ ಯುಗದಲ್ಲಿ ಸಾಮಾಜಿಕ ಮಾಧ್ಯಮಗಳು ಕನ್ನಡ ಭಾಷೆಯನ್ನು ಹೊಸ ರೂಪಗಳಿಗೆ ಒಯ್ಯುತ್ತಿವೆ. ಈ ರೂಪಾಂತರವು ಭಾಷೆಯ ಚೈತನ್ಯವನ್ನು ತೋರಿಸಿದರೂ, ಶುದ್ಧತೆ ಮತ್ತು ಸಾಂಪ್ರದಾಯಿಕ ವ್ಯಾಕರಣದ ಮೇಲೆ ಪ್ರಭಾವವನ್ನು ಬೀರುತ್ತಿದೆ. ಆದ್ದರಿಂದ, ಭಾಷಾ ಶಿಕ್ಷಣ, ಡಿಜಿಟಲ್ ಸಾಕ್ಷರತೆ ಮತ್ತು ತಂತ್ರಜ್ಞಾನದಲ್ಲಿ ಕನ್ನಡದ ಸಮರ್ಪಕ ಬಳಕೆಯನ್ನು ಉತ್ತೇಜಿಸುವುದು ಅಗತ್ಯವಾಗಿದೆ. ಭಾಷೆಯ ಬೆಳವಣಿಗೆ ಮತ್ತು ಸಂರಕ್ಷಣೆಯ ನಡುವೆ ಸಮತೋಲನ ಸಾಧಿಸುವುದೇ ಭವಿಷ್ಯದ ಸವಾಲಾಗಿದೆ.

**ಪರಾಮರ್ಶನ ಗ್ರಂಥಗಳು:**


1. Crystal, D. (2011). Internet linguistics: A student guide. Routledge.
2. Fishman, J. A. (1991). Reversing language shift. Multilingual Matters.
3. Kachru, B. B. (1994). Englishization and contact linguistics. World Englishes, 13(2), 135–154.
4. ರಾಜೇಂದ್ರ, ಎಸ್. (2018). ಭಾಷೆ ಮತ್ತು ಸಮಾಜ. ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
5. ಶಿವಕುಮಾರ್, ಎಂ. (2020). ಡಿಜಿಟಲ್ ಮಾಧ್ಯಮ ಮತ್ತು ಕನ್ನಡ ಭಾಷೆ. ಕನ್ನಡ ಅಧ್ಯಯನ, 15(1), 45–58.